

بِسْمِ اللّٰهِ الرَّحْمَنِ الرَّحِيم

# ಯು.ಕೆ. ಜಲ್ಸ : ಕಾರ್ಯಕರ್ತರ ಸೇವೆ ಅತ್ಯಂತ ಶ್ಲಾಘನೀಯ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **19–08–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನ ಅನುಗ್ರಹದಿಂದ ಬ್ರಿಟನಿನ ಜಲ್ಸ ಸಾಲಾನ ಕಳೆದ ವಾರ ಜರಗಿತು. ಅನೇಕ ಆತಂಕಗಳಿದ್ದರೂ, ಲೋಕದ ಪರಿಸ್ಥಿತಿಯ ಕಾರಣದಿಂದ ಎಲ್ಲದಕ್ಕಿಂತ ಹೆಚ್ಚಿನ ಮಟ್ಟದ ಚಿಂತೆ ಇದ್ದರೂ ಜಲ್ಸ ಶಾಂತಿಯುತವಾಗಿ ಅತ್ಯಂತ ಉತ್ತಮ ರೀತಿಯಲ್ಲಿ ಮೂರು ದಿನಗಳ ಕಾಲ ಜರಗಿತು– ಅಲ್‌ಹಮ್ದುಲಿಲ್ಲಾಹ್. ಅಲ್ಲಾಹನು ಇನ್ನು ಮುಂದೆ ಸಹ ಎಲ್ಲ ವಿಧಗಳ ಆತಂಕಗಳಿಂದಲೂ ಕೆಡುಕಿನಿಂದಲೂ ಜಮಾಅತನ್ನು ರಕ್ಷಿಸುವವನಾಗಲಿ. ಜಲ್ಸದ ಆಧ್ಯಾತ್ಮಿಕ ಪರಿಸರದ ಬಗ್ಗೆ ನಮ್ಮವರು ಮತ್ತು ಅನ್ಯರು ಎಲ್ಲರೂ ಪ್ರಸ್ತಾಪಿಸಿದರು. ಅವರೆಲ್ಲರೂ ಅದನ್ನು ತಮ್ಮೊಳಗೆ ಅನುಭವಿಸಿದರು. ಈ ಪ್ರಭಾವವನ್ನು ಅಲ್ಲಾಹನು ಯಾವಾಗಲೂ ಸ್ಥಿರವಾಗಿರಿಸಲಿ. ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವ ದಾಸರಾಗಿ, ಅಲ್ಲಾಹನ ಮುಂದೆ ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವುದಾಗಿ ನಾವು ಮಾಡಿದ ಪ್ರತಿಜ್ಞೆಯನ್ನು ಮತ್ತು ನಮ್ಮ ಮೇಲೆ ಪ್ರಭಾವ ಬೀರಿದ ವಿಷಯಗಳನ್ನು ನಮ್ಮ ಜೀವಿತದ ಭಾಗವನ್ನಾಗಿ ಯಾವಾಗಲೂ ಮಾಡಲು ಪ್ರಯತ್ನಿಸುತ್ತಾ ಇರುವೆವು ಎಂದು ಅಲ್ಲಾಹನ ಮುಂದೆ ಬಾಗುತ್ತಾ ಹೇಳುವವರಾಗಬೇಕು. ನಾವು ಯಾವಾಗಲೂ ಹೀಗೆ ಪ್ರಾರ್ಥಿಸುತ್ತಾ ಇರಬೇಕು. ಓ ಅಲ್ಲಾಹ್, ನಿನ್ನ ಅನುಗ್ರಹಗಳ ಸುರಿಮಳೆ ನಮ್ಮ ಮೇಲೆ ಸುರಿಸಲ್ಪಡುತ್ತಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ನೀಡಿದ ಶುಭವಾರ್ತೆಗಳನ್ನು ನೀನು ಈಡೇರಿಸುತ್ತಾ ಇರುವೆ. ನಮ್ಮ ಯಾವುದೇ ತಪ್ಪು ಕೆಲಸ, ನ್ಯೂನತೆ, ಅನರ್ಹತೆಗಳ ಕಾರಣದಿಂದ ಅವು ನಮ್ಮ ಜೀವಿತದ ಭಾಗವಾಗುವುದರಿಂದ ನಮ್ಮನ್ನು ವಂಚಿತರನ್ನಾಗಿ ಮಾಡದಿರಲಿ. ಈ ರೀತಿ ಸಹ ಪ್ರಾರ್ಥನೆ ಮಾಡಿರಿ: ಓ ಅಲ್ಲಾಹ್, ಒಳಿತನ್ನು ಮಾಡುವ ಶಕ್ತಿ ನಿನ್ನಿಂದಲೇ ಲಭಿಸುತ್ತದೆ. ಅವುಗಳಲ್ಲಿ ಸ್ಥಿರವಾಗಿಡುವ ಶಕ್ತಿ ಸಹ ನಿನ್ನಿಂದಲೇ ಲಭಿಸುತ್ತದೆ. ನಾವು ನಮ್ಮ ಬಲಹೀನತೆಗಳ ಮೇಲೆ ಜಯವನ್ನು ಸಹ ನಿನ್ನ ಅನುಗ್ರಹ ಮೂಲಕವೇ ಪಡೆಯಲು ಸಾಧ್ಯವಾಗುವುದು. ನಮ್ಮ ಸಾಮಾನ್ಯ ಪ್ರಯತ್ನಗಳಿಗೆ ಸಹ ನೀನು ಯಾವಾಗಲೂ ಅನುಗ್ರಹ ಸುರಿಸುತ್ತಾ ಇರು. ನಿನ್ನೊಂದಿಗೆ ಯಾವಾಗಲೂ ಅಂಟಿಕೊಂಡಿರುವ ಮತ್ತು ಯಾವಾಗಲೂ ನಿನಗೆ ಕೃತಜ್ಞತೆ ಅರ್ಪಿಸುವವರಾದ ದಾಸರೊಂದಿಗೆ ನಮ್ಮನ್ನು ಸೇರಿಸು.

ಅಲ್ಲಾಹನು ನಮ್ಮನ್ನು ಯಾವಾಗಲೂ ಅವನಿಗೆ ಕೃತಜ್ಞತೆ ಅರ್ಪಿಸುವ ದಾಸರನ್ನಾಗಿ ಮಾಡಲಿ. ಅಲ್ಲಾಹನು ಹೇಳಿದ: **ಲಇನ್ ಶಕರ್‌ತುಮ್ ಲಅಝೀದನ್ನಕುಮ್**. ನೀವು ಕೃತಜ್ಞತೆ ಅರ್ಪಿಸುವವರಾದರೆ ನಿಶ್ಚಯವಾಗಿಯೂ ನಾವು ನಿಮಗೆ ವರ್ಧಿಸಿ ಕೊಡುವೆವು ಎಂಬ ವಚನಕ್ಕೆ ಪಾತ್ರರಾಗುವವರಾಗೋಣ. ಅಲ್ಲಾಹನ ಅನುಗ್ರಹದಿಂದ ಜಲ್ಸದ ಕೆಲಸ ಜಲ್ಸಕ್ಕೆ ಮೊದಲೇ ಪ್ರಾರಂಭವಾಗುತ್ತದೆ. ಆ ಕೆಲಸಗಳನ್ನು ಮಾಡಲು ಖುದ್ದಾಮ್, ಅತ್‌ಫಾಲ್ ಮತ್ತು ಅನ್‌ಸಾರ್ ಸ್ವಯಂ ಸೇವಕರಾಗಿ ತಮ್ಮನ್ನು ಅರ್ಪಿಸುತ್ತಾರೆ. ಬಹಳ ಕಷ್ಟಪಟ್ಟು ಜಲ್ಸದ ಮೊದಲು ನಿಷ್ಠೆಯಿಂದ ವಖಾರೆ ಅಮಲ್ ಮಾಡುತ್ತಾರೆ. ಅನಂತರ ಜಲ್ಸದ ಸಮಯದಲ್ಲಿ ಸಹ ತಮ್ಮ ಹೊಣೆಗಾರಿಕೆಗಳನ್ನು ನಿಭಾಯಿಸುತ್ತಾರೆ. ಕಳೆದ ವರ್ಷ ಸಹ ಕೆನಡದಿಂದ ಖುದ್ದಾಮ್ ವಖಾರೆ ಅಮಲ್‌ಗೋಸ್ಕರ ಆಗಮಿಸಿದ್ದರು. ಈ ವರ್ಷ ಅಮೇರಿಕದಿಂದಲೂ ಖುದ್ದಾಮ್ ವಖಾರೆ ಅಮಲ್‌ಗೋಸ್ಕರ ಆಗಮಿಸಿದ್ದಾರೆ. ಈ ರೀತಿ ವಖಾರೆ ಅಮಲ್ ಸಹ ಅಂತರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದೆ. ಕಾರ್ಯಕರ್ತರು ಲೋಕದ ವಿವಿಧ ದೇಶಗಳಿಂದ ಬರುತ್ತಿದ್ದಾರೆ. ಅಮೇರಿಕದಿಂದ ಬಂದ ಬಹುತೇಕ ಖುದ್ದಾಮ್ ಜಲ್ಸ ಆರಂಭದ ಮೊದಲಿನ ಕೆಲಸಗಳಲ್ಲಿ ಭಾಗವಹಿಸಿದರು. ಕೆನಡದ 150ಕ್ಕಿಂತ ಹೆಚ್ಚು ಖುದ್ದಾಮ್ ಜಲ್ಸದ ವೈಂಡ್‌ಅಪ್ ಕೆಲಸದಲ್ಲಿ ಭಾಗವಹಿಸಿದರು. ಅಲ್ಲಾಹನು ಅವರೆಲ್ಲರಿಗೂ ಉತ್ತಮ ಪ್ರತಿಫಲ ನೀಡಲಿ. ಯು.ಕೆ.ಯ ಖುದ್ದಾಮ್ ಮತ್ತು ಅತ್‌ಫಾಲ್ ವಖಾರೆ ಅಮಲ್ ಮಾಡಿದ್ದಾರೆ. ಮತ್ತು ಜಲ್ಸದ ಡ್ಯೂಟಿಗಳಲ್ಲಿ ನಿರತರಾಗಿದ್ದಾರೆ. ಅವರು ಸಹ ನಿಶ್ಚಯವಾಗಿಯೂ ನಾವು ಕೃತಜ್ಞತೆ ಅರ್ಪಿಸಲು ಅರ್ಹರಾಗಿದ್ದಾರೆ. ಅವರು ಬಹಳ ಕಷ್ಟಪಟ್ಟು ಕೆಲಸ ಮಾಡಿದರು. ಅವರು ಯಾವಾಗಲೂ ಕಷ್ಟಪಟ್ಟು ಕೆಲಸ ಮಾಡುತ್ತಾ ಇರುತ್ತಾರೆ.

ಯು.ಕೆ.ಯ ಅಂದಾಜು ಆರು ಸಾವಿರ ಪುರುಷರು, ಮಹಿಳೆಯರು, ಬಾಲಕರು, ಬಾಲಿಕೆಯರು ಮತ್ತು ಮಕ್ಕಳು ಅತಿಥಿಗಳಿಗೆ ಸೇವೆ ಸಲ್ಲಿಸಲು ನೇಮಿಸಲ್ಪಟ್ಟಿದ್ದರು. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಕಾರ್ಯಕರ್ತರನ್ನು ಅಲ್ಲಾಹನು ಒದಗಿಸಿರುವುದು ಅವನ ಅತಿದೊಡ್ಡ ಅನುಗ್ರಹವಾಗಿದೆ. ಅವರು ಟಾಯ್ಲೆಟ್‌ಗಳನ್ನು ಸ್ವಚ್ಛಗೊಳಿಸುವುದರಿಂದ ಮೊದಲುಗೊಂಡು ಆಹಾರ ಬೇಯಿಸುವ, ಆಹಾರ ಸರಬರಾಜು ಮಾಡುವ ಮತ್ತು ಜಲ್ಸಗಾಹ್‌ದಲ್ಲಿ ವಿವಿಧ ಕೆಲಸಗಳನ್ನು ಮಾಡಲು ನಿಯುಕ್ತರಾಗಿದ್ದರು. ಸೆಕ್ಯೂರಿಟಿ, ಪಾರ್ಕಿಂಗ್ ವ್ಯವಸ್ಥೆ ಸಹ ಅವರೇ ಮಾಡಿದರು. ಅನಂತರ ಜಲ್ಸದ ಕೊನೆಗೆ ಸಾಮಗ್ರಿಗಳನ್ನು ಸಾಗಿಸುವ ಕೆಲಸ ಅತ್ಯಂತ ಯೋಜನಾಬದ್ಧ ರೀತಿಯಲ್ಲಿ ನೈಪುಣ್ಯತೆಯಿಂದ ನಿರ್ವಹಿಸಿದರು. ಇಂತಹ ದೃಶ್ಯಗಳು ನಮಗೆ ಲೋಕದಲ್ಲಿ ಬೇರೆ ಎಲ್ಲಿಯೂ ಕಾಣಿಸಲಾರವು. ಈ ಕಾರ್ಯಕರ್ತರೆಲ್ಲರೂ ನಾವು ಅತ್ಯಂತ ಹೆಚ್ಚು ಕೃತಜ್ಞತೆ ಅರ್ಪಿಸಲು ಅರ್ಹರಾಗಿದ್ದಾರೆ. ಅದೇ ರೀತಿ ಈ ಕಾರ್ಯಕರ್ತರು, ಸ್ವಯಂಸೇವಕರು ಸಹ ತಮಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ಸೇವೆ ಮಾಡುವ ಸಂದರ್ಭ ಲಭಿಸಿದ್ದಕ್ಕಾಗಿ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ಇನ್ನು ಮುಂದೆ ಸಹ ಮೊದಲಿಗಿಂತ ಹೆಚ್ಚಿನ ಮಟ್ಟದಲ್ಲಿ ಸೇವೆ ಸಲ್ಲಿಸುವ ಭಾಗ್ಯ ಅಲ್ಲಾಹನು ದಯಪಾಲಿಸಲಿ ಎಂದು ಅವರು ಪ್ರಾರ್ಥಿಸುತ್ತಿರಬೇಕು. ಹೊರಗಿನಿಂದ ಆಗಮಿಸಿದ ಅತಿಥಿಗಳು ಬಹಳ ಆಶ್ಚರ್ಯ ಚಕಿತರಾಗಿ ಈ ಮಕ್ಕಳು, ಯುವಕರು ಮತ್ತು ವೃದ್ಧರು ಮಾಡಿರುವ ಸೇವೆಯು ತಮ್ಮನ್ನು ಯಾವ ರೀತಿ ಪ್ರಭಾವಿತರನ್ನಾಗಿ ಮಾಡಿದೆ ಎಂಬುದನ್ನು ವಿವರಿಸಿದ್ದಾರೆ. ಕೆಲವು ಅತಿಥಿಗಳ ಅನಿಸಿಕೆಗಳನ್ನು ನಾನು ನಿಮ್ಮ ಮುಂದಿಡುತ್ತೇನೆ. ಜಲ್ಸದ ಕಾರ್ಯಕ್ರಮಗಳು ಮತ್ತು ಜಲ್ಸದ ಕೆಲಸ ಮಾಡುವವರು ಮೌನವಾಗಿ ಎಷ್ಟು ಪ್ರಭಾವಶಾಲಿಯಾಗಿ ತಬ್ಲೀಗ್ ಮಾಡುತ್ತಾರೆಂದರೆ, ಸಾಹಿತ್ಯಗಳನ್ನು ಹಂಚುವುದರ ಮೂಲಕ ಅಥವಾ ಬೇರೆ ರೀತಿಗಳಲ್ಲಿ ತಬ್ಲೀಗ್ ಮಾಡುವುದಕ್ಕಿಂತ ಉತ್ತಮವಾಗಿ ಅವರು ಅತಿಥಿಗಳ ಮೇಲೆ ಪ್ರಭಾವ ಬೀರಿದರು.

ಬೆನಿನ್ ದೇಶದ ರಕ್ಷಣಾ ಮಂತ್ರಿ ಅತಿಥಿಯಾಗಿ ಆಗಮಿಸಿದ್ದರು. ಅವರು ಹೇಳುತ್ತಾರೆ: ನಾನು ಈ ಸಮ್ಮೇಳನದಲ್ಲಿ ಭಾಗವಹಿಸಿ ಶಾಂತಿ

ಮತ್ತು ಪ್ರೀತಿಯ ರಾಯಭಾರಿಗಳನ್ನು ಕಾಣುವ ಸಂದರ್ಭ ನನಗೆ ಲಭಿಸಿತು. ಪ್ರತಿಯೊಬ್ಬ ಬಾಲಕ ಮತ್ತು ಯುವಕ ಅನ್ಯರನ್ನು ಸುಸ್ವಭಾವದೊಂದಿಗೆ ಭೇಟಿಯಾಗುವುದನ್ನು ನಾನು ಕಂಡೆನು. ಅತಿಥಿಯ ಭಾಷೆ ಅರ್ಥವಾಗದಿದ್ದರೂ ಮುಗುಳು ನಗೆಯೊಂದಿಗೆ ಸ್ವಾಗತಿಸಿ ಅತಿಥಿಯ ಭಾಷೆಯಲ್ಲಿ ಏನಾದರೂ ಹೇಳಲು ಪ್ರಯತ್ನಿಸುವುದಾಗಿ ನೋಡಿದೆನು. ಜಲ್ಸ ಸಾಲಾನ ವಾಸ್ತವಿಕ ಭ್ರಾತೃತ್ವ ಭಾವನೆಯ ಬಹಳ ದೊಡ್ಡ ಉದಾಹರಣೆಯಾಗಿದೆ. ಈ ಜಲ್ಸವನ್ನು ನಾನು ವಾಸ್ತವಿಕ ನೆಮ್ಮದಿಯ ತಾಣವೆಂದು ಹೇಳುತ್ತೇನೆ. ಜಲ್ಸದಲ್ಲಿ ಸೇರಿದ ಪ್ರತಿಯೊಬ್ಬ ಚಿಕ್ಕವನು, ದೊಡ್ಡವನು ಮತ್ತು ವೃದ್ಧ ತ್ಯಾಗ ಮನೋಭಾವದಿಂದ ಅನ್ಯರಿಗೆ ಸುಖ ತಲಪಿಸುವ ಯೋಚನೆ ಹೊಂದಿರುತ್ತಾರೆ. ನಿಮ್ಮ ಜಲ್ಸ ನನಗೆ ಒಂದು ಅಕಾಡೆಮಿಯ ಸ್ಥಾನದಲ್ಲಿದೆ. ನನಗೆ ಇಲ್ಲಿ ಅನೇಕ ವಿಷಯಗಳನ್ನು ಕಲಿಯಲು ಸಾಧ್ಯವಾಯಿತು. ಇಷ್ಟು ದೊಡ್ಡ ಸಮಾವೇಶದಲ್ಲಿ ಯಾವುದೇ ನೂಕು ನುಗ್ಗಲು ಇರಲಿಲ್ಲ. ಎಲ್ಲ ವ್ಯವಹಾರಗಳು ಸುವ್ಯವಸ್ಥಿತವಾಗಿ ಚಲಾಯಿಸಲ್ಪಡುತ್ತಿದ್ದುವು. ಡ್ಯೂಟಿಯಲ್ಲಿದ್ದ ಪ್ರತಿಯೊಬ್ಬ ಚಿಕ್ಕವನೂ ದೊಡ್ಡವನೂ ಅತಿಥಿಯ ಆವಶ್ಯಕತೆಯನ್ನು ಈಡೇರಿಸಲು ಸಿದ್ಧನಾಗಿದ್ದನು. ಯಾವುದಾದರೂ ವಸ್ತುವಿನ ಬಗ್ಗೆ ಸೂಚನೆ ನೀಡಿದರೆ ಅದು ಅಲ್ಲಿ ಇಲ್ಲದಿದ್ದರೆ ಸಹ, ತಕ್ಷಣ ಅದನ್ನು ಖರೀದಿಸಿ ಒದಗಿಸಲು ಪ್ರಯತ್ನ ಮಾಡಲಾಗುತ್ತಿತ್ತು. ಎಲ್ಲದಕ್ಕಿಂತಲೂ ದೊಡ್ಡ ವಿಷಯ ಜಲ್ಸಕ್ಕೆ ಆಗಮಿಸಿದವರ ಸೆಕ್ಯುರಿಟಿ ಬಗ್ಗೆ ಮಾಡಿದ ಅತ್ಯುನ್ನತ ಮಟ್ಟದ ಪ್ರಭಾವಶಾಲಿ ವ್ಯವಸ್ಥೆಯಾಗಿದೆ. ಸೆಕ್ಯುರಿಟಿಯ ಉನ್ನತ ಮತ್ತು ಉತ್ತಮವಾದ ಯೋಜನೆ ಮಾಡಲಾಗಿತ್ತು. ಯಾವುದಾದರೂ ವೃತ್ತಿ ನಿರತ ಭದ್ರತಾ ವ್ಯವಸ್ಥಾಪಕರು ಇದನ್ನು ಮಾಡಿದ ಹಾಗೆ ಕಾಣುತ್ತಿತ್ತು. ಆದರೆ ಅಲ್ಲಿ ನನಗೆ ಯಾವುದೇ ಪೋಲೀಸ್ ಅಥವಾ ಸೈನಿಕ ಕಾಣಿಸಲಿಲ್ಲ. ಇಷ್ಟು ಉತ್ತಮ ವ್ಯವಸ್ಥೆಯ ರಹಸ್ಯವೇನೆಂದು ತಿಳಿಯಲು ನಾನು ಪ್ರಯತ್ನಿಸಿದೆ. ಈ ಜನರು ಖಿಲಾಫತನ್ನು ಅನುಸರಿಸುವವರಾಗಿದ್ದಾರೆ ಎಂಬುದು ಇದಕ್ಕೆ ಕಾರಣವೆಂಬ ತೀರ್ಮಾನಕ್ಕೆ ಬಂದೆ. ಆ ಕಾರಣದಿಂದಲೇ ತ್ಯಾಗ ಮನೋಭಾವ ಹೊಂದಿದ ಒಂದು ಸಮುದಾಯವು ನಿರ್ಮಾಣಗೊಂಡಿತು. ಅದು ಪ್ರತಿಯೊಂದು ರೀತಿಯ ಬಲಿದಾನ ಮಾಡಲು ಸಿದ್ಧವಾಗಿರುತ್ತದೆ. ಬೆನಿನ್ ದೇಶದಿಂದ ಒಬ್ಬ ಜರ್ನಲಿಸ್ಟ್ ಆಗಮಿಸಿದ್ದರು. ಅವರು ಹೀಗೆ ಹೇಳಿದರು: ಈ ಜಲ್ಸದ ಉನ್ನತ ಮಟ್ಟದ ವ್ಯವಸ್ಥೆಗಳ ಬಗ್ಗೆ ಯಾರೊಂದಿಗಾದರೂ ಹೇಳಿದರೆ, ಅವನು ಕಣ್ಣಾರೆ ಕಾಣುವ ತನಕ ಅದನ್ನು ನಂಬಲಾರನು. ನಿಮ್ಮ ಜಲ್ಸದಲ್ಲಿ ಭಾಗವಹಿಸಿ ನನಗೆ ಪ್ರತೀಕ್ಷೆಯ ಸಂದೇಶ ಲಭಿಸಿದೆ. ಲೋಕದಲ್ಲಿ ಎಲ್ಲ ಕಡೆಗಳಲ್ಲಿಯೂ ಸ್ವಾರ್ಥ ಲಾಭಕ್ಕೋಸ್ಕರ ಗಲಭೆ ಗೊಂದಲಗಳನ್ನು ಮಾಡಲಾಗುತ್ತಿದೆ. ಆದರೆ ನಿಮ್ಮ ಜಲ್ಸದಲ್ಲಿ ಯುವಕರನ್ನೂ ಮಕ್ಕಳನ್ನೂ ನೋಡಿದೆ ಅವರು ತಮ್ಮ ಬಗ್ಗೆ ಯೋಚಿಸದೆ ಅನ್ಯರ ಸೇವೆ ಮಾಡುವುದಕ್ಕೆ ಯಾವಾಗಲೂ ಸಿದ್ಧರಾಗಿರುತ್ತಾರೆ. ಇಂತಹ ಯುವಜನರಿಂದ ಮತ್ತು ಮಕ್ಕಳಿಂದ ಒಂದು ಹೊಸಲೋಕ ಜನ್ಮ ತಾಳುವುದು. ಅದರಲ್ಲಿ ಸ್ವಾರ್ಥತೆ ಇಲ್ಲದಾಗುವುದು. ಅನ್ಯರಿಗೆ ಸೇವೆ ಸಲ್ಲಿಸುವುದು ಅವರ ಉನ್ನತ ಉದ್ದೇಶ ಲಕ್ಷ್ಯವಾಗುವುದು. ಈ ಉನ್ನತ ಮಟ್ಟದ ಉಪದೇಶವನ್ನೊಳಗೊಂಡ ಇಸ್ಲಾಮ್ ಮತ್ತು ಅಹ್ಮದಿಯ್ಯತ್, ಅನ್ಯರಿಗೆ ಒಂದು ಸ್ವಚ್ಛ ದರ್ಪಣದ ಹಾಗಿದೆ. ಅದು ಇಸ್ಲಾಮಿನ ಸುಂದರ ಮುಖವನ್ನು ಲೋಕಕ್ಕೆ ತೋರಿಸಿಕೊಡುತ್ತಿದೆ. ನಾನು ಜರ್ನಲಿಸ್ಟ್ ಆಗಿರುವ ಕಾರಣ ಲೋಕದ ಬಹುತೇಕ ದೇಶಗಳನ್ನು ಸಂದರ್ಶಿಸಿದ್ದೇನೆ. ಸೌದಿ ಅರೇಬಿಯಾದಲ್ಲಿ ಹಜ್‌ಗೆ ಮಾಡುವ ವ್ಯವಸ್ಥೆಯನ್ನು ನೋಡಿದ್ದೇನೆ. ಇರಾನ್‌ನಲ್ಲಿ ಬಹಳ ದೊಡ್ಡ ಸಮ್ಮೇಳನಗಳಲ್ಲಿ ಭಾಗವಹಿಸಿದ್ದೇನೆ. ಯು.ಎನ್.ಓ. ವತಿಯಿಂದ ಜರಗಿಸಲ್ಪಡುವ ದೊಡ್ಡ ದೊಡ್ಡ ಸಮ್ಮೇಳನಗಳನ್ನು ನೋಡಿದ್ದೇನೆ. ಆದರೆ ಇಷ್ಟು ಉನ್ನತ ಮಟ್ಟದ ವ್ಯವಸ್ಥೆ ನಾನು ಎಲ್ಲಿಯೂ ಕಾಣಲಿಲ್ಲ. ಇದಕ್ಕೆ ಕಾರಣವೇನೆಂದರೆ ನಿಸ್ವಾರ್ಥತೆಯಿಂದ ಕೆಲಸ ಮಾಡುವ ಮಕ್ಕಳು, ಯುವಕರು ಮತ್ತು ವೃದ್ಧರು ಇಲ್ಲಿದ್ದಾರೆ. ಅವರು ಅತಿಥಿಗಳಿಗೆ ಸೇವೆ ಮಾಡಲು ಪ್ರತಿಕ್ಷಣ ಸಿದ್ಧರಾಗಿರುತ್ತಾರೆ. ಅವರಿಗೆ ಅವರ ಖಲೀಫರ ಮಾರ್ಗದರ್ಶನ ಯಾವಾಗಲೂ ಲಭಿಸುತ್ತಾ ಇರುತ್ತದೆ. ನನ್ನ ಹೃದಯದ ಸ್ಥಿತಿಯನ್ನು ಸರಿಯಾಗಿ ತಿಳಿಸಲು ನನಗೆ ಅಸಾಧ್ಯವಾಗುತ್ತದೆ. ಪ್ರತಿಯೊಂದು ವರ್ಗದ ಜನರು ಹಸನ್ಮುಖರಾಗಿ ಅತಿಥಿಗಳನ್ನು ಸ್ವಾಗತಿಸುವುದು ಮತ್ತು ಸೇವೆ ಮಾಡುವುದು ನನಗೆ ಆಶ್ಚರ್ಯಕರವಾಗಿ ತೋರುತ್ತದೆ. ಈ ಕಾರ್ಯಕರ್ತರಲ್ಲಿ ಯಾರು ಬಡವರು ಮತ್ತು ಯಾರು ಶ್ರೀಮಂತರು ಎಂದು ತಿಳಿಯುವುದು ಅಸಾಧ್ಯವಾಗಿತ್ತು. ಎಲ್ಲರೂ ಒಂದೇ ರೀತಿಯ ಸೇವಾ ಮನೋಭಾವದಿಂದ ಅನ್ಯರಿಗೆ ಸುಖ ನೀಡಲು ಹಗಲು ರಾತ್ರಿ ಕಷ್ಟಪಡುತ್ತಿದ್ದರು. ಎಂ.ಟಿ.ಎ. ವ್ಯವಸ್ಥೆ ಸಹ ನನಗೆ ಆಶ್ಚರ್ಯಕರವಾಗಿ ಕಂಡಿತು. ನಾನು ಬೆನಿನ್ ದೇಶದ ನೇಶನಲ್ ಟಿ.ವಿ.ಯ ಡೈರೆಕ್ಟರ್ ಆಗಿದ್ದೆ. ಇಷ್ಟು ಉತ್ತಮ ಮಟ್ಟದ ನೇರ ಪ್ರಸಾರ ವ್ಯವಸ್ಥೆಯನ್ನು ನಾನು ಬೇರೆ ಎಲ್ಲಿಯೂ ಕಾಣಲಿಲ್ಲ. ಯು.ಎನ್.ಓ.ದಲ್ಲಿ ಸಹ ಇಷ್ಟು ಭಾಷೆಗಳಲ್ಲಿ ತಕ್ಷಣ ಭಾಷಾಂತರದ ನೇರ ಪ್ರಸಾರ ವ್ಯವಸ್ಥೆ ಇರುವುದಿಲ್ಲ. ನಿಮ್ಮ ಜಲ್ಸದಲ್ಲಿ ಭಾಷಣಗಳ ಭಾಷಾಂತರದ ವ್ಯವಸ್ಥೆ ಇದೆ. ಈ ಜಲ್ಸದಲ್ಲಿ ಬಂದು ಸೇರಿದ ಪ್ರತಿಯೊಬ್ಬ ಅತಿಥಿ ತನ್ನ ಭಾಷೆಯಲ್ಲಿ ಭಾಷಣಗಳ ಭಾಷಾಂತರವನ್ನು ಆಲಿಸುವಾಗ ತನ್ನ ದೇಶದಲ್ಲಿ ಜಲ್ಸ ನಡೆಯುತ್ತಿರುವ ಹಾಗೆ ಅವನಿಗೆ ಭಾಸವಾಗುತ್ತದೆ. ತನ್ನ ಭಾಷೆಯಲ್ಲಿ ಮತ್ತು ಸಮುದಾಯದಲ್ಲಿ ಜಲ್ಸ ನಡೆಯುವುದಾಗಿ ಅವರಿಗೆ ತೋರುತ್ತದೆ. ನಾನು ಅಹ್ಮದಿಯ್ಯತ್‌ನಿಂದ ಕಲಿತದ್ದೇನೆಂದರೆ, ವಿಶ್ವಾಸವನ್ನು ಬೇರೆ ಪ್ರತಿಯೊಂದಕ್ಕಿಂತ ಶ್ರೇಷ್ಠವೆಂದು ಪರಿಗಣಿಸಬೇಕೆಂದು. ಸತ್ಯಕ್ಕೇ ಜಯ ಸಿಗುತ್ತದೆ ಎಂದು. ಶಕ್ತಿಶಾಲಿ ಯಾವಾಗಲೂ ಶಕ್ತಿಶಾಲಿಯಾಗಿರಲಾರ. ಈ ಜಲ್ಸದಲ್ಲಿ ಭಾಗವಹಿಸಿ ನಾನು ಹೇಳುತ್ತೇನೆ. ಅಲ್ಲಾಹನೊಂದಿಗೆ ಸಾಮೀಪ್ಯ ಗಳಿಸುವ ಮಾರ್ಗ ಈಗಲೂ ಇದೆ. ಆ ಮಾರ್ಗದಲ್ಲಿ ಕಾರ್ಯನಿರತನಾಗುವವನಿಗೆ ಅದು ಸಾಧ್ಯವಾಗುವುದು.

ಕೊಂಗೋಕನ್‌ಶಾಸಾ ದೇಶದ ಒಂದು ಪ್ರಾಂತ್ಯದ ಅಟಾರ್ನಿ ಜನರಲ್ ಜಲ್ಸಕ್ಕೆ ಆಗಮಿಸಿದ್ದರು. ಅವರು ಹೀಗೆ ಹೇಳಿದರು: ಇಪ್ಪತ್ತೈದು ವರ್ಷಗಳಿಂದ ನಾನು ಮ್ಯಾಜಿಸ್ಟ್ರೇಟ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಜಲ್ಸದ ಬಗ್ಗೆ ಗಾಢವಾಗಿ ಪರಿಶೋಧನೆ ನಡೆಸಿದೆ. ಕೇವಲ ಸಂಪತ್ತಿನಿಂದ ಏನನ್ನೂ ಮಾಡಲು ಸಾಧ್ಯವಿಲ್ಲ ಎಂದು ನಾನು ನಿರ್ಧಾರಕ್ಕೆ ಬಂದೆನು. ಐಕ್ಯತೆಯಿಂದ ಎಲ್ಲರೂ ಒಂದು ದೇಹದ ಹಾಗೆ ಒಂದಾಗಿ ಕೆಲಸ ಮಾಡಿದರೆ ಎಲ್ಲವನ್ನೂ ಮಾಡಲು ಸಾಧ್ಯವಿದೆ. ಜಲ್ಸದ ಕಾರ್ಯಕರ್ತರು ಒಂದು ದೇಹದ ಹಾಗೆ ಆಗಿ ಕಾರ್ಯನಿರತರಾದಾಗ ಅಸಾಧ್ಯವಾದುದನ್ನು ಸಾಧ್ಯವೆಂದು ಮಾಡಿ ತೋರಿಸಿದರು. ಅವರು ಕಾಡುಗುಡ್ಡಗಳನ್ನು ವಾಸಸ್ಥಳವನ್ನಾಗಿ ಪರಿವರ್ತಿಸಿದರು. ಅಲ್ಲಿ ಎಲ್ಲ ಸೌಲಭ್ಯಗಳನ್ನು ಒದಗಿಸಿದರು. ಸ್ವಚ್ಛವಾದ ಟಾಯ್ಲೆಟ್‌ಗಳು, ವಾಸ ಸ್ಥಳಗಳು, ರೇಡಿಯೋ ಟಿ.ವಿ. ಸ್ಟೇಶನ್‌ಗಳು ಹೀಗೆ ಎಲ್ಲವನ್ನೂ ವ್ಯವಸ್ಥೆಗೊಳಿಸಲಾಗಿತ್ತು. ವಿವಿಧ ಭಾಷೆಗಳಲ್ಲಿ ಕಾರ್ಯಕ್ರಮಗಳನ್ನು ಬಿತ್ತರಿಸಲಾಯಿತು. ವಿವಿಧ ದೇಶಗಳಿಂದ ಆಗಮಿಸಿದ ಶ್ರೀಮಂತರು, ಬಡವರು, ದೊಡ್ಡ ಅಧಿಕಾರಿಗಳು, ರಾಜಕಾರಣಿಗಳು, ವಿದ್ಯಾಪರಿಣತರು,

ಬುದ್ಧಿ ಜೀವಿಗಳು ಎಲ್ಲರೂ ಒಗ್ಗೂಡಿ ಕೆಲಸ ಮಾಡುತ್ತಿದ್ದರು. ಅಂದಾಜು ನಲ್ವತ್ತು ಸಾವಿರದಷ್ಟು ಅತಿಥಿಗಳಿಗೆ ಊಟ, ಪಾನೀಯ ಮತ್ತು ಇತರ ಆವಶ್ಯಕತೆಗಳನ್ನು ಒದಗಿಸುವುದು ಸುಲಭವಾದ ಕೆಲಸವೇನೂ ಅಲ್ಲ. ಆರು ಸಾವಿರ ಕಾರ್ಯಕರ್ತರು ಯಾವುದೇ ಗುಲ್ಲು ಗದ್ದಲವಿಲ್ಲದೆ ಸಂತೋಷದಿಂದ ಕೆಲಸ ನಿರ್ವಹಿಸಿದರು. ಈ ಸ್ವಯಂ ಸೇವಕರಲ್ಲಿ ಚಿಕ್ಕ ವಯಸ್ಸಿನ ಮಕ್ಕಳಿಂದ ಎಂಬತ್ತು ವರ್ಷದ ವೃದ್ಧರ ತನಕ ಇದ್ದರು. ಅವರು ಇತರರ ಸೇವೆ ಮಾಡಿ ಸಂತೋಷ ಪಡುತ್ತಿದ್ದರು. ಎಲ್ಲ ಕಡೆಗಳಿಂದ ಪ್ರೀತಿ ಮತ್ತು ಭ್ರಾತೃತ್ವದ ದೃಶ್ಯವೇ ಕಾಣಿಸುತ್ತಿತ್ತು. ಅಹ್ಮದಿಯಾ ಜಮಾಅತ್ ಬಹಳ ಪ್ರಭಾವಶಾಲಿಯಾಗಿ ಕಾರ್ಯನಿರ್ವಹಿಸುತ್ತದೆ. ಅದೆಂದೂ ಸೋತು ಹೋಗಲಾರದು– ಇನ್‌ಶಾಅಲ್ಲಾಹ್. ನಾನು ಎಲ್ಲರೊಂದಿಗೆ ಹೇಳಲು ಬಯಸುತ್ತೇನೆ: ನೀವು ಈ ಜಮಾಅತನ್ನು ಸಮೀಪದಿಂದ ನೋಡಿರಿ. ಆಗ ನಿಮಗೆ ಸ್ವತಃ ವಾಸ್ತವಿಕತೆ ಏನೆಂದು ತಿಳಿಯುವುದು. ಒಬ್ಬರನ್ನೊಬ್ಬರು ಅನೇಕ ವರ್ಷಗಳಿಂದ ಪರಿಚಿತರಾಗಿರುವಂತೆ ಅಲ್ಲಿ ತೋರುತ್ತಿತ್ತು.

ಜಲ್ಸದ ಒಂದು ಸೌಂದರ್ಯವೇನೆಂದರೆ ಕಾರ್ಯಕರ್ತರು ಮಾತ್ರವಲ್ಲ, ಅಲ್ಲಿ ಬಂದು ಸೇರಿದ ಅತಿಥಿಗಳು ಸಹ ತಮ್ಮ ವರ್ತನೆಯಿಂದ ಅನ್ಯರಲ್ಲಿ ಪ್ರಭಾವ ಬೀರಿದರು. ಜಲ್ಸ ಮೌನವಾಗಿ ತಬ್ಲೀಗ್ ಮಾಡುವ ಒಂದು ಮಾರ್ಗವಾಗಿದೆ. ಆದುದರಿಂದ ಜಲ್ಸದ ಡ್ಯುಟಿಯಲ್ಲಿರುವವರು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ಅವರು ತಮ್ಮ ಕೆಲಸಗಳ ಮೂಲಕ ಇಸ್ಲಾಮಿನ ಸಂದೇಶ ತಲಪಿಸುತ್ತಿದ್ದಾರೆ. ಅವರು ಮುಸ್ಲಿಮೇತರರ ಮೇಲೆ ಪ್ರಭಾವ ಬೀರುತ್ತಾರೆ. ಅವರು ಅಲ್ಲಾಹನ ಅನುಗ್ರಹಗಳಿಗೆ ವಾರೀಸುದಾರರಾಗುತ್ತಿದ್ದಾರೆ. ಜಲ್ಸದಲ್ಲಿ ಭಾಗವಹಿಸಿದ ಅಹ್ಮದಿಯರು ಸಹ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ಅಲ್ಲಾಹನು ಅವರ ಮೂಲಕವೂ ಮೌನವಾಗಿ ತಬ್ಲೀಗ್ ಮಾಡಿಸುತ್ತಿದ್ದಾನೆ.

ನೈಜರ್ ದೇಶದ ಅಧ್ಯಕ್ಷರ ಧಾರ್ಮಿಕ ಕಾರ್ಯಗಳ ವಿಶೇಷ ಸಲಹೆಗಾರ ಸಹ ಈ ವರ್ಷ ಜಲ್ಸಕ್ಕೆ ಬಂದಿದ್ದರು. ಅವರು ಹೇಳುತ್ತಾರೆ: ನಾನು ಸಾಮಾನ್ಯವಾಗಿ ಇಡೀ ವರ್ಷ ಪ್ರಯಾಣದಲ್ಲಿರುತ್ತೇನೆ. ಧಾರ್ಮಿಕ ಸಭೆಗಳಲ್ಲಿ ಭಾಗವಹಿಸುತ್ತೇನೆ. ಆದರೆ ನಾನು ಇಂತಹ ಆಧ್ಯಾತ್ಮಿಕ ದೃಶ್ಯವನ್ನು ಇಂದಿನ ತನಕ ಎಲ್ಲಿಯೂ ಕಾಣಲಿಲ್ಲ. ಜಲ್ಸದಲ್ಲಿ ಭಾಗವಹಿಸುತ್ತಿರುವಾಗ ಆಕಾಶದಿಂದ ಪ್ರಕಾಶ ಸುರಿಯುತ್ತಿರುವ ಹಾಗೆ ನನಗೆ ತೋರುತ್ತಿತ್ತು. ಬೈಅತ್ ದೃಶ್ಯವನ್ನು ಕಂಡಾಗ ಅವರು ಹೇಳಿದರು: ನಾನು ಬೈಅತ್ ರಿಝ್‌ವಾನ್‌ನಲ್ಲಿ ಭಾಗವಹಿಸುತ್ತಿರುವೆನೋ ಎಂದು ನನಗೆ ಅನಿಸಿತು.

ಜಪಾನ್ ದೇಶದಿಂದ ಅಯೂಮಾ ಯೂಸುಫ್ ಎಂಬ ಪ್ರಸಿದ್ಧ ವಿದ್ವಾಂಸರು ಆಗಮಿಸಿದ್ದರು. ಅವರು ಜಪಾನ್ ಅಗ್ರಿಕಲ್ಚರ್‌ನ ಅಧ್ಯಕ್ಷರೂ ಆಗಿದ್ದಾರೆ. ಅವರು ಹೇಳುತ್ತಾರೆ: ಅಹ್ಮದಿ ಯುವಕರ ಮತ್ತು ಮಕ್ಕಳ ಸೇವೆಯ ಮನೋಭಾವ ಪ್ರಶಂಸಾರ್ಹವಾಗಿದೆ. ಇಂದು ಲೋಕದ ಯಾವುದೇ ಸಮುದಾಯದಲ್ಲಿ ಇಂತಹ ಸ್ವಯಂ ಸೇವಕರಾಗಿ ವರ್ತಿಸುವ ಯುವಜನರು ಇಲ್ಲವೆಂದೇ ಹೇಳಬಹುದು. ಈ ದೃಶ್ಯ ಕೇವಲ ಇಲ್ಲಿನ ಜಲ್ಸ ಸಾಲಾನದಲ್ಲಿ ಕಾಣಲು ಸಿಗುತ್ತದೆ. ಹಲವು ಯುವಜನರು ಅತಿಥಿಗಳಿಗೆ ಊಟ ಒದಗಿಸುವ ವ್ಯವಸ್ಥೆಯಲ್ಲಿ ತಲ್ಲೀನರಾಗಿರುತ್ತಾರೆ. ಬೇರೆ ಕೆಲವರು ಅತಿಥಿಗಳನ್ನು ತರಲು ವಾಹನ ವ್ಯವಸ್ಥೆ ಮಾಡುವುದರಲ್ಲಿ ನಿರತರಾಗಿರುತ್ತಾರೆ. ಹಲವರು ಕುಡಿಯಲು ನೀರು ಒದಗಿಸುತ್ತಾರೆ. ಹಲವರು ವೃದ್ಧರ ಸೇವೆ ಮಾಡುತ್ತಿರುತ್ತಾರೆ. ಮಕ್ಕಳು ಸಹ ಉತ್ಸಾಹಭರಿತರಾಗಿ ಭಾಗವಹಿಸುತ್ತಾರೆ. ಅಹ್ಮದಿಯ್ಯತಿನ ವರ್ತಮಾನ ಕಾಲವೂ ಪ್ರಕಾಶಮಾನವಾಗಿದೆ. ಭವಿಷ್ಯತ್ ಕಾಲವೂ ಪ್ರಕಾಶಮಾನವಾಗಿರುವುದು ಎಂದು ತೋರುತ್ತದೆ — ಇನ್‌ಶಾಅಲ್ಲಾಹ್.

ಯುಗಾಂಡ ದೇಶದ ವೈಸ್ ಪ್ರೆಸಿಡೆಂಟ್ ಎಡ್‌ವರ್ಡ್ ಸೆಕಾಂದಿ ಜಲ್ಸಕ್ಕೆ ಆಗಮಿಸಿದ್ದರು. ಅವರನ್ನು ಜಲ್ಸಗಾಹ್‌ದ ಸುತ್ತಲೂ ತಿರುಗಾಡಿಸಿ ತೋರಿಸಲಾಯಿತು. ಎಲ್ಲ ಕಾರ್ಯಕರ್ತರು ಸ್ವಯಂ ಸೇವಕರೆಂದು ಅವರಿಗೆ ತಿಳಿಸಿದಾಗ ಅವರಿಗೆ ಬಹಳ ಆಶ್ಚರ್ಯವಾಯಿತು. ಸೆಕ್ಯುರಿಟಿಯವರನ್ನು ನೋಡಿ ಅವರು ಹೇಳಿದರು: ಇತರ ಕಾರ್ಯಕರ್ತರು ಸ್ವಯಂ ಸೇವಕರಾಗಿದ್ದರೂ ಈ ಜನರಿಗೆ ನೀವು ಹಣವನ್ನು ಕೊಡುತ್ತಿರಬಹುದು ಎಂದು ಹೇಳಿದರು. ಆಗ ಅವರೊಂದಿಗೆ ಹೇಳಲಾಯಿತು: ಇಲ್ಲಿ ಎಲ್ಲ ಕಾರ್ಯಕರ್ತರು ಸ್ವಯಂ ಸೇವಕರಾಗಿಯೇ ಕೆಲಸ ಮಾಡುತ್ತಾರೆ ಎಂದು ಹೇಳಿದಾಗ ಅವರು ಹೇಳಿದರು: ನಾನು ನನ್ನ ಜೀವಿತ ಕಾಲದಲ್ಲಿ ಮುಸ್ಲಿಮರ ಇಷ್ಟು ದೊಡ್ಡ ಸಮ್ಮೇಳನದಲ್ಲಿ ಇಷ್ಟು ಶಾಂತಿಯುತವಾಗಿ ಕೆಲಸ ಮಾಡುತ್ತಾ ಇರುವುದನ್ನು ಎಲ್ಲಿಯೂ ಕಂಡಿಲ್ಲ. ನಾನು ಮುಸ್ಲಿಮರ ಬಗ್ಗೆ ಕೇಳಿರುವುದೇನೆಂದರೆ ಅವರು ಜನರ ಕೊರಳು ಕತ್ತರಿಸುತ್ತಾರೆ ಮತ್ತು ಅನ್ಯರಿಗೆ ಕಷ್ಟಕೊಡುತ್ತಾರೆಂದೇ ಆಗಿದೆ. ಯುಗಾಂಡದಲ್ಲಿ ಸಹ ಮುಸ್ಲಿಮರು ಪರಸ್ಪರ ಜಗಳ ಮಾಡುತ್ತಾ ಇರುತ್ತಾರೆ. ಕೆಲವು ಸಾರಿ ಸರಕಾರ ಮಧ್ಯೆ ಪ್ರವೇಶ ಮಾಡಬೇಕಾಗುತ್ತದೆ. ಆದರೆ ನೈಜ ಮುಸ್ಲಿಮರು ಯಾರೆಂದು ಈಗ ನನಗೆ ತಿಳಿಯಿತು. ಇಸ್ಲಾಮಿನ ಉಪದೇಶ ಶಾಂತಿಯದು ಎಂದು ಈಗ ನಾನು ಅರಿತುಕೊಂಡೆನು.

ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬ ಅಹ್ಮದಿಗೆ ವಿಶ್ವಾಸದಲ್ಲಿಯೂ ಅನುಷ್ಠಾನ ಕರ್ಮಗಳಲ್ಲೂ ಉತ್ತಮ ಸ್ಥಿತಿ ಉಂಟಾಗಲು ಜಲ್ಸ ಸಹಾಯಕವಾಗುತ್ತದೆ. ಮಾತ್ರವಲ್ಲ ಅನ್ಯರ ಮೇಲೆಯೂ ಜಲ್ಸ ಪ್ರಭಾವ ಬೀರುತ್ತದೆ. ಜಲ್ಸದ ಮೂಲಕ ಅಹ್ಮದಿಯ್ಯತ್ ಅಥವಾ ನೈಜ ಇಸ್ಲಾಮಿನ ತಬ್ಲೀಗ್ ಮಾಡಲು ಹೊಸ ಹೊಸ ಮಾರ್ಗಗಳು ತೆರೆಯಲ್ಪಡುತ್ತವೆ. ಮುಖ್ಯ ಉದ್ದೇಶ ಜಮಾಅತಿನ ಜನರಿಗೆ ತರಬೇತಿ ನೀಡುವುದಾಗಿದೆ. ಆದರೆ ಅನ್ಯರು ಜಲ್ಸಕ್ಕೆ ಆಗಮಿಸುವ ಕಾರಣ ತಬ್ಲೀಗ್ ಮಾಡುವ ವಿಪುಲವಾದ ಹೊಸ ಮಾರ್ಗಗಳು ಸಹ ತೆರೆಯಲ್ಪಡುತ್ತವೆ.

ಬೆಲ್‌ಜಿಯಮ್ ದೇಶದ ಫಾತಿಮ ದಯಾಲೂ ಎಂಬ ಮಹಿಳೆ ತನ್ನ ಇಬ್ಬರು ಮಕ್ಕಳೊಂದಿಗೆ ಆಗಮಿಸಿ ಬೈಅತ್ ಮಾಡಿದರು. ಅವರು ಹೇಳುತ್ತಾರೆ: ನನ್ನ ಪತಿ ನನಗೆ ಜಮಾಅತಿನ ಪರಿಚಯ ಮಾಡಿಕೊಟ್ಟರು. ಆದರೆ ನಾನು ಜಮಾಅತಿನ ಬಗ್ಗೆ ಗೊಂದಲದ ಮನೋಭಾವ ಹೊಂದಿದ್ದೆ. ಕೆಲವರು ಹೇಳಿದರು– ಅಹ್ಮದಿಯಾ ಜಮಾಅತ್ ಮುಸ್ಲಿಮ್ ಪಂಗಡಗಳಲ್ಲಿ ಒಂದು ಎಂದು. ಬೇರೆ ಕೆಲವರು ಹೇಳಿದರು– ಅಹ್ಮದಿಯರು ಮುಸ್ಲಿಮರೇ ಅಲ್ಲ ಎಂದು. ನಾನು ಜಲ್ಸದಲ್ಲಿ ಭಾಗವಹಿಸಿ ಸತ್ಯವನ್ನು ಕಂಡು ಹಿಡಿಯಲು ನಿರ್ಧರಿಸಿದೆನು. ಜಲ್ಸದಲ್ಲಿ ಭಾಗವಹಿಸಿ ನನಗೆ ತಿಳಿಯಿತು– ಅಹ್ಮದಿಯಾ ಜಮಾಅತಿನ ಜನರು ಬಹಳ ಒಳ್ಳೆಯವರೂ ಸಜ್ಜನರೆಂದೂ ಎಲ್ಲರಿಗಿಂತಲೂ ಶ್ರೇಷ್ಠರಾದ ನೈಜ ಮುಸ್ಲಿಮರೆಂದೂ ತಿಳಿಯಿತು.

ನನ್ನ ಭಾಷಣದ ಬಗ್ಗೆ ಪ್ರಸ್ತಾಪಿಸುತ್ತಾ ಆ ಮಹಿಳೆ ಹೇಳಿದರು: ಆ ಭಾಷಣದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹದೀಸುಗಳನ್ನು ಉಲ್ಲೇಖಿಸಲಾಗಿದೆ, ಶಾಂತಿ ಸಮಾಧಾನ, ಸತ್ಯ, ಧೈರ್ಯ ಮತ್ತು ಸಹನೆ ಬಗ್ಗೆ ಅದರಲ್ಲಿ ಪ್ರಸ್ತಾಪಿಸಲಾಗಿತ್ತು. ಅಲ್ಲಾಹನಿಗೆ ನಾನು ಕೃತಜ್ಞತೆ ಅರ್ಪಿಸುತ್ತೇನೆ. ಅವನ ಸಾಮೀಪ್ಯ ಗಳಿಸುವ ಮಾರ್ಗವನ್ನು ಅವನು ತೋರಿಸಿಕೊಟ್ಟನು. ಸ್ವಯಂಸೇವಕರು ಹಗಲು ರಾತ್ರಿ

ಕೆಲಸ ಮಾಡಿ ಆಯಾಸಗೊಂಡಿದ್ದರೂ ನಮಗೆ ಸೌಕರ್ಯ ಒದಗಿಸಿ ಕೊಡುವ ಬಗ್ಗೆ ಗಮನ ಹರಿಸಿದರು ಮತ್ತು ಬಹಳ ಗೌರವ ನೀಡಿದರು. ಅವರಿಗೆ ಸಹ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ ಎಂದು ಹೇಳಿದರು.

ಈ ವರ್ಷ ಸಂಪರ್ಕ ಮಾಧ್ಯಮಗಳಲ್ಲಿ ಹಿಂದಿನ ವರ್ಷಗಳಿಗಿಂತ ಹೆಚ್ಚು ಜಲ್ಸದ ಬಗ್ಗೆ ಪ್ರಚಾರ ಲಭಿಸಿತು. ಇದು ಅಲ್ಲಾಹನ ವಿಶಿಷ್ಟ ಅನುಗ್ರಹವಾಗಿದೆ. ಅಸಂಖ್ಯಾತ ಅಭಿಪ್ರಾಯಗಳು ದೊರೆತಿವೆ. ಅವುಗಳಲ್ಲಿ ಕೆಲವನ್ನು ಮಾತ್ರ ನಾನು ಪ್ರಸ್ತಾಪಿಸಿದ್ದೇನೆ. ಎಂ.ಟಿ.ಎ. ಆಫ್ರಿಕ ಮತ್ತು ಬೇರೆ ಚ್ಯಾನಲ್‌ಗಳ ಮೂಲಕ ಆಫ್ರಿಕದಲ್ಲಿ ಜಲ್ಸದ ಕಾರ್ಯಕ್ರಮಗಳು ಪ್ರಸಾರಗೊಂಡವು. ಯು.ಕೆ. ಜಲ್ಸ ಸಾಲಾನದ ಕಾರ್ಯಕ್ರಮಗಳು ಎಂ.ಟಿ.ಎ. ಆಫ್ರಿಕ ಇಂಟರ್‌ನೇಶನಲ್ ಮೂಲಕ ಪ್ರಥಮ ಬಾರಿ ಬಿತ್ತರಿಸಲಾಯಿತು. ಪೂರ್ವ ಮತ್ತು ಪಶ್ಚಿಮ ಆಫ್ರಿಕದಿಂದ ನೂರಾರು ಜನರು ಶುಭಾಶಯಗಳ ಸಂದೇಶ ಕಳುಹಿಸಿದ್ದಾರೆ.

ಅಲ್ಲಾಹನ ಅನುಗ್ರಹಗಳ ವಲಯ ವಿಶಾಲಗೊಳ್ಳುತ್ತಾ ಇದೆ. ಅದರಂತೆ ನಾವು ಕೃತಜ್ಞತೆ ಅರ್ಪಿಸುವ ವಲಯ ಸಹ ವಿಶಾಲಗೊಳ್ಳುತ್ತಾ ಹೋಗಬೇಕಾಗಿದೆ. ಆ ಮೂಲಕ ನಾವು **ಲ ಅಝೀದನ್ನಕುಮ್** ನಾನು ನಿಮಗೆ ನಿಶ್ಚಯವಾಗಿಯೂ ವರ್ಧಿಸಿ ಕೊಡುವೆನು ಎಂಬ ಅಲ್ಲಾಹನ ವಾಗ್ದಾನದ ವಾರೀಸುದಾರರಾಗುತ್ತಾ ಮುಂದೆ ಸಾಗುವೆವು. ಅಲ್ಲಾಹನು ನಮಗೆ ನೀಡುವ ಪಾರಿತೋಷಕಗಳನ್ನು ವಿಸ್ತಾರಗೊಳಿಸಲಿ. ಜಲ್ಸದಲ್ಲಿ ಭಾಗವಹಿಸಿದ ಪ್ರತಿಯೊಬ್ಬ ಅಹ್ಮದಿ ಮತ್ತು ಇಲ್ಲಿಗೆ ಬರದೆ ಟಿ.ವಿ. ಮೂಲಕ ವೀಕ್ಷಿಸುವ ಪ್ರತಿಯೊಬ್ಬ ಅಹ್ಮದಿ ತಾನು ಅಲ್ಲಾಹನಿಗೆ ಅರ್ಪಿಸುವ ಕೃತಜ್ಞತೆಗಳನ್ನು ಅತ್ಯಂತ ವರ್ಧಿಸಲು ಪ್ರಯತ್ನ ಮಾಡಬೇಕು. ಅದಕ್ಕಿರುವ ಮಾರ್ಗ ಇದೊಂದೇ ಆಗಿದೆ. ಅದೆಂದರೆ ನಾವು ಅಲ್ಲಾಹನ ಆಜ್ಞೆಗಳನ್ನು ಅನುಷ್ಠಾನಕ್ಕೆ ತರುವವರಾಗಬೇಕು. ಅಲ್ಲಾಹನು ಎಲ್ಲರಿಗೂ ಹೀಗೆ ಮಾಡುವ ಭಾಗ್ಯ ನೀಡಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 19-08-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email*:** *khutuba.kannada@gmail.com*

**You can find all the Sermons archived at**: www.alislam.org/friday-sermon